ಕರ್ನಾಟಕ ಸರ್ಕಾರ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೊಡಿಯಾಲ್‌ಬೈಲು, ಮಂಗಳೂರು.
DISTRICT INSTITUTE OF EDUCATION AND TRAINING (DIET), MANGALORE-575003.
☎: 0824-2493052. Fax : 0824-2497439. Email: diet.dakshinakannada@gmail.com

ಕ.ಸಂ.ಎ6/ಇನ್‌ಸ್ಪಾಯರ್.ಅವಾರ್ಡ್/01/2019-20 ದಿನಾಂಕ:16.01.2020

**ಸುತ್ತೋಲೆ**

ವಿಷಯ:- 2019-20ನೇ ಸಾಲಿನ ಜಿಲ್ಲಾ ಮಟ್ಟದ ಇನ್‌ಸ್ಪಾಯರ್ ವಸ್ತುಪ್ರದರ್ಶನ ಸ್ಪರ್ಧೆಯನ್ನು ಆಯೋಜಿಸಿರುವ ಬಗ್ಗೆ

ಉಲ್ಲೇಖ:- ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ರವರ ಪತ್ರ ಸಂ.DPI.SIS.ರಾ.ಆ.ಶಾ.ಶಿ.ತ/14/18-19 ದಿನಾಂಕ:22.10.2018

~~~~~~~~

2019-20ನೇ ಸಾಲಿನಲ್ಲಿ ಇನ್‌ಸ್ಪಾಯರ್ ಅವಾರ್ಡ್ ಮೊತ್ತ ಮಂಜೂರಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ 307 ಹಾಗೂ ಉಡುಪಿ ಜಿಲ್ಲೆಯ 153 ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ವಸ್ತುಪ್ರದರ್ಶನ ಸ್ಪರ್ಧೆಯನ್ನು ದಿನಾಂಕ:29.01.2020 ಮತ್ತು 30.01.2020 ರಂದು ಪಿಲಿಕುಲ ಶಿವರಾಮ ಕಾರಂತ ನಿಸರ್ಗಧಾಮ ವಾಮಂಜೂರು ಇಲ್ಲಿ ಆಯೋಜಿಸಲಾಗಿದೆ.

1. ಇನ್‌ಸ್ಪಾಯರ್ ಅವಾರ್ಡ್ ಪಡೆದ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ ಬೇರೆ ಯಾವುದೇ ಮಕ್ಕಳನ್ನು ಕರೆದುಕೊಂಡು ಬರಬಾರದು ಎಂದು ತಿಳಿಸಿದೆ.

2. ಸ್ಪರ್ಧೆಯಲ್ಲಿ ಪ್ರದರ್ಶಿಸಲಾಗುವ ಮಾದರಿಗಳ ಬಗ್ಗೆ ವಿವರಣೆಯನ್ನು ಕೇವಲ ಅವಾರ್ಡ್ ಪಡೆದ ವಿದ್ಯಾರ್ಥಿಯೇ ನೀಡಬೇಕಾಗಿರುತ್ತದೆ.

3. ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ನೀಡಿರುವ ಮಾಹಿತಿಯ ಆಧಾರದಲ್ಲಿಯೇ ಮಾದರಿಗಳನ್ನು ಮಾಡುವುದು ಯಾವುದೇ ಸಲಹೆ ಸೂಚನೆ ಅಗತ್ಯವಿದ್ದಲ್ಲಿ ತಾಲೂಕು ಸಂಪನ್ಮೂಲ ತಂಡ/ ಜಿಲ್ಲಾ ಸಂಪನ್ಮೂಲ ತಂಡದಿಂದ ಮಾಹಿತಿ ಪಡೆಯಬಹುದಾಗಿದೆ.

4. ಅವಾರ್ಡ್ ಪಡೆದ ವಿದ್ಯಾರ್ಥಿಗಳು ಅವರ ವೈಯುಕ್ತಿಕ ಮಾಹಿತಿ (ಬಯೋಡಾಟ) ಮಾದರಿಯ ವಿವರಣೆಯ ಸಮಗ್ರ ಮಾಹಿತಿಯನ್ನು 03 ಪ್ರತಿಯಲ್ಲಿ ಮತ್ತು ಸಿಡಿ ಯಲ್ಲಿ ತರುವುದು.

5. ಅವಾರ್ಡ್ ಪಡೆದ ವಿದ್ಯಾರ್ಥಿಗಳ ಫೋಟೋ ಐ.ಡಿ ಯನ್ನು ಸಂಬಂಧಿಸಿದ ಶಾಲಾ ಮುಖ್ಯಸ್ಥರು ದೃಢೀಕರಿಸಿ ಸ್ಪರ್ಧೆಗೆ ಕಳುಹಿಸಿಕೊಡುವುದು.

6. ಜಿಲ್ಲಾ ಮಟ್ಟದ ಸ್ಪರ್ಧೆಗೆ ಪ್ರಯಾಣಿಸುವ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಖರ್ಚು ವೆಚ್ಚಗಳನ್ನು ಅವಾರ್ಡ್ ಮೊತ್ತದಲ್ಲಿ ಭರಿಸಿಕೊಳ್ಳಲು ತಿಳಿಸಿದೆ. ಸ್ಪರ್ಧಾ ಸ್ಥಳದಲ್ಲಿ ಊಟ/ಉಪಹಾರಗಳನ್ನು ನೀಡಲಾಗುವುದು.

7. ಥರ್ಮೋಕೋಲ್‌ನಿಂದ ಸಿದ್ಧಪಡಿಸಿರುವ ಮಾರುಕಟ್ಟೆಯಲ್ಲಿ ಸಿದ್ಧವಾಗಿ ದೊರಕುವ, ಈಗಾಗಲೇ ಇತರ ವಸ್ತಪ್ರದರ್ಶನದಲ್ಲಿ ಪ್ರದರ್ಶಿಸಿರುವ ಮಾದರಿಗಳನ್ನು ಪ್ರದರ್ಶಿಸುವಂತಿಲ್ಲ. ಮಕ್ಕಳ ವಿಜ್ಞಾನ ಕಾಂಗ್ರೆಸ್‌ನಲ್ಲಿ ಪ್ರದರ್ಶಿಸಿರುವ ಪ್ರಾಜೆಕ್ಟ್‌ಗಳನ್ನು ಸಹ ಪ್ರದರ್ಶಿಸುವಂತಿಲ್ಲ. ಮಾರುಕಟ್ಟೆಯಲ್ಲಿ ಹಲವು ಸಂಸ್ಥೆಗಳು ಮಾದರಿಗಳನ್ನು ಸಿದ್ಧಪಡಿಸಿ ಮಾರಾಟಮಾಡುತ್ತಿದ್ದು, ಇವು ಏಕ ರೂಪ ಮಾದರಿಗಳಾಗಿದ್ದು ಯಾವುದೇ ಕಾರಣಕ್ಕೂ ಇಂತಹ ಮಾದರಿಗಳನ್ನು ಪ್ರದರ್ಶಿಸಿಸುವಂತಿಲ್ಲ
~~~~~~~~

8. ಪ್ಲಾಸ್ಟಿಕ್ ಮತ್ತು ಥರ್ಮಕೋಲ್‌ನ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿಲಾಗಿದೆ. ಬ್ಯಾನರ್‌ಗಳನ್ನು ಬಟ್ಟೆಯಿಂದ ಮಾಡಿಸಲು ಸೂಚಿಸಲಾಗಿದೆ. ಬ್ಯಾನರ್‌ಗಳ ಗಾತ್ರ 2×3 ಇದ್ದರೆ ಉತ್ತಮ. ಬ್ಯಾನರ್‌ಗಳನ್ನು ಗೋಡೆಗಳಿಗೆ ಅಂಟಿಸಲು ಅಗತ್ಯ ವಸ್ತುಗಳನ್ನು ತರುವುದು. ಬ್ಯಾನರ್‌ಗಳನ್ನು ತೂಗು ಹಾಕಲು ಅಗತ್ಯ ಸಾಮಾಗ್ರಿಗಳನ್ನು ತರುವುದು ಗೋಡೆಗಳಲ್ಲಿ ಆಣಿ ಅಥವಾ ತೂತು ಇರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

9. ಸ್ಪರ್ಧೆಯಲ್ಲಿ ಭಾಗವಹಿಸಲಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯ ಓರ್ವ ಮಾರ್ಗದರ್ಶಿ ಶಿಕ್ಷಕರು ಮಾತ್ರ ಭಾಗವಹಿಸಲು ಅವಕಾಶವಿದೆ ಹೆಣ್ಣು ಮಕ್ಕಳು ಭಾಗವಹಿಸುತ್ತಿದ್ದಲ್ಲಿ ಆ ವಿದ್ಯಾರ್ಥಿನಿಯನ್ನು ಮಹಿಳಾ ಶಿಕ್ಷಕರೇ ಕರೆ ತರುವುದು. ವಿಕಲಚೇತನ ವಿದ್ಯಾರ್ಥಿ/ನಿಯ ಒಬ್ಬ ಪೋಷಕರಿಗೆ ಮಾತ್ರ ಊಟ/ಉಪಹಾರ ಮತ್ತು ಅಗತ್ಯವಿದ್ದಲ್ಲಿ ತಂಗುವ ವ್ಯವಸ್ಥೆ ಮಾಡಲಾಗುವುದು.

10. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ದಿನಾಂಕ:29.01.2020 ರಂದು ರಾತ್ರಿ ತಂಗುವಿಕೆಯ ಅಗತ್ಯವಿರುವ ವಿದ್ಯಾರ್ಥಿಗಳು ಲಘು ಹಾಸಿಗೆ, ಹೊದಿಕೆ, ಅಗತ್ಯ ಔಷದಗಳು, ಉಡುಪು, ಲೇಖನ ಸಾಮಾಗ್ರಿ. ಇತ್ಯಾದಿಗಳನ್ನು ತರುವುದು. ವಸತಿ ವ್ಯವಸ್ಥೆ ಅಗತ್ಯವಿರುವ ವಿದ್ಯಾರ್ಥಿಗಳ ವಿವರಗಳನ್ನು ದಿನಾಂಕ:25.01.2020 ರೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡುವುದು.

11. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ತಮ್ಮ ಮಾದರಿಗಳಿಗೆ ಬೇಕಾಗುವ ವಿದ್ಯುತ್ ಪಾಯಿಂಟ್‌ಗಳು ಪ್ರದರ್ಶನ ಕೊಠಡಿಗಳ ಸ್ವಿಚ್ ಬೋಡನಲ್ಲಿರುತ್ತವೆ ಅಲ್ಲಿಂದ ದೂರ ಅಳತೆಯ / ಹೆಚ್ಚಿನ ಸಂಪರ್ಕಗಳ ಅಗತ್ಯವಿದ್ದಲ್ಲಿ ವಿದ್ಯಾರ್ಥಿಗಳು Extention Cord ಹಾಗೂ ಅದಕ್ಕೆ ಸಂಬಧಿಸಿದ ಪರಕರಗಳನ್ನು ಗಳನ್ನು ತರುವುದು ಹಾಗೂ ಎಲ್ಲಾ ವಿದ್ಯಾರ್ಥಿಗಳು ತಮ್ಮ ಪ್ರದರ್ಶನದ ಕೊಠಡಿಗೆ ಅಳವಡಿಸಲು ಒಂದು ಬೀಗ ಹಾಗೂ ಬೀಗದ ಕೀಯನ್ನು ತರುವುದು.

12. ವಸ್ತು ಪ್ರದರ್ಶನದ ಅವಧಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಉತ್ತಮ ವರ್ತನೆಯನ್ನು ಅಪೇಕ್ಷಿಸಿದೆ.

ಕಾರ್ಯಕ್ರಮದ ಕುರಿತು ಹೆಚ್ಚಿನ ವಿವರಗಳಿಗಾಗಿ ನೋಡಲ್ ಅಧಿಕಾರಿಯವರಾದ ಶ್ರೀನಿವಾಸ ಅಡಿಗ ಉಪನ್ಯಾಸಕರು ಡಯಟ್ ಮಂಗಳೂರು ಇವರ ದೂರವಾಣಿ ಸಂ.8970074220, 9481430968 ಇವರನ್ನು ಸಂಪರ್ಕಿಸಲು ತಿಳಿಸಿದೆ.

ಉಪನಿರ್ದೇಶಕರು(ಅಭಿವೃದ್ಧಿ)
ಡಯಟ್ ದಕ್ಷಿಣ ಕನ್ನಡ ಮಂಗಳೂರು

ರಿಗೆ

ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ / ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಸೂಕ್ತಕ್ರಮಕ್ಕಾಗಿ

ಪ್ರತಿಯನ್ನು:-

1. ಮಾನ್ಯ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು 560085 ಇವರಿಗೆ ವಂದನೆಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಶ್ರೀ ಶ್ರೀನಿವಾಸ ಅಡಿಗ ಉಪನ್ಯಾಸಕರು ಡಯಟ್ ಮಂಗಳೂರು ಇವರಿಗೆ ಸೂಕ್ತಕ್ರಮಕ್ಕಾಗಿ
3. ಕಛೇರಿ ಪ್ರತಿ.